ಇ) ನಿರ್ಧಾರವಾಗಿರುವುದಿಲ್ಲ.

ಈ) ಹೌದು.

ರಾಜ್ಯದ ಸಹಕಾರ ಸಂಘಗಳ ಸಿಬ್ಬಂದಿಗಳ ನೇಮಕಾತಿಗಾಗಿ ಸರ್ಕಾರದ ಅನುಮತಿ

119(165) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕಳೆದ ಮೂರು ವರ್ಷಗಳಿಂದ ರಾಜ್ಯದ ಯಾವ ಯಾವ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳು ಮತ್ತು ರಾಜ್ಯದಲ್ಲಿರುವ ಸಹಕಾರ ಹಾಲಿನ ಡೈರಿಗಳು ಸಿಬ್ಬಂದಿ ನೇಮಕ ಮಾಡಿಕೊಳ್ಳಲು ಇಲಾಖೆಯ ಅನುಮತಿ ಕೇಳಿಕೊಂಡಿವೆ ಮತ್ತು ಈ ರೀತಿ ಕೇಳಿಕೊಂಡಿರುವ ಸಂಸ್ಥೆಗಳ ಸಂಖ್ಯೆ ಎಷ್ಟು? (ಸಂಸ್ಥೆಗಳವಾರು ವಿವರ ಒದಗಿಸುವುದು)

2) ಈ ರೀತಿ ಹುದ್ದೆ ಭರ್ತಿ ಮಾಡಿಕೊಳ್ಳಲು ಮೇಲ್ಕಂಡ ಎರಡೂ ಸಂಸ್ಥೆಗಳಲ್ಲಿ ಯಾವ ಯಾವುದಕ್ಕೆ ಅನುಮತಿ ನೀಡಲಾಗಿದೆ, ಅನುಮತಿ ಪಡೆದ ಸಹಕಾರಿ ಸಂಸ್ಥೆಗಳು ಯಾವುವು ಮತ್ತು ಪ್ರತಿಯೊಂದಕ್ಕೂ ಯಾವಾವ ಹುದ್ದೆ ಮತ್ತು ಸಂಖ್ಯೆಗಳನ್ನು ಸಂಸ್ಥೆವಾರು ವಿವರ ನೀಡುವುದು.

3) ಸಹಕಾರಿ ಸಂಸ್ಥೆಗಳು ನಷ್ಟದ ದಾರಿ ಹಿಡಿದಿರುವ ಹಾಗೂ ಮಾಹಿತಿ ತಂತ್ರಜ್ಞಾನದ ಯುಗದ ಈ ಕಾಲದಲ್ಲಿ ಈ ರೀತಿ ನೌಕರರನ್ನು ತುಂಬಿಸಿಕೊಳ್ಳುವುದರಿಂದ ಸಂಸ್ಥೆಗಳು ಇನ್ನಷ್ಟು ನಷ್ಟ ಅನುಭವಿಸುವುದಿಲ್ಲವೇ?

4) ಈ ರೀತಿ ಹುದ್ದೆ ಭರ್ತಿ ಮಾಡಿಕೊಳ್ಳುವುದರಲ್ಲಿ ಸಾಕಷ್ಟು ಭ್ರಷ್ಟಾಚಾರಗಳಿಗೆ ಎಡೆಮಾಡಿಕೊಟ್ಟಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

5) ಇದನ್ನು ತಡೆಗಟ್ಟಲು ಮೇಲ್ಕಂಡ ಸಂಸ್ಥೆಗಳಿಗೆ ಅನುಮತಿ ನಿರಾಕರಿಸಲು ಸರ್ಕಾರ ಯೋಚಿಸಿದೆಯೇ?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು):

1) ಕಳೆದ ಮೂರು ವರ್ಷಗಳಿಂದ ರಾಜ್ಯದ 10 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಸಿಬ್ಬಂದಿ ನೇಮಕ ಮಾಡಿಕೊಳ್ಳಲು ಇಲಾಖೆಯ ಅನುಮತಿ ಕೋರಿದೆ. (ವಿವರಗಳನ್ನು ಅನುಬಂಧ-1 ರಲ್ಲಿ ನಮೂದಿಸಿದೆ)

ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಶಿವಮೊಗ್ಗ, ಕೋಲಾರ, ರಾಯಚೂರು, ಬಳ್ಳಾರಿ ಸಹಕಾರಿ ಹಾಲು ಒಕ್ಕೂಟಗಳು, ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ಅನುಮತಿ ಕೇಳಿಕೊಂಡಿರುತ್ತದೆ.

2) ಮಂಡ್ಯ, ಶಿವಮೊಗ್ಗ, ಮೈಸೂರು ಕೆನರಾ, ಬಿಜಾಪುರ, ತುಮಕೂರು, ಚಿತ್ರದುರ್ಗ, ಬೀದರ್, ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಹುದ್ದೆ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಶಿವಮೊಗ್ಗ ಮತ್ತು ಕೋಲಾರ ಹಾಲು ಒಕ್ಕೂಟಗಳಿಗೆ ಅನುಮತಿ ನೀಡಲಾಗಿದೆ. (ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ).

3) ಸಹಕಾರ ಸಂಸ್ಥೆಗಳು ಕೆಲಸದ ಒತ್ತಡಕ್ಕೆ ಅನುಗುಣವಾಗಿ ಕಂಪ್ಯೂಟರೀಕರಣವನ್ನು ಲಾಭ ನಷ್ಟದ ವಿಷಯವನ್ನು ಹಾಗೂ ತಾಂತ್ರಿಕ ಹುದ್ದೆಗಳ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ನೌಕರರನ್ನು ನೇಮಕ ಮಾಡಿಕೊಳ್ಳುತ್ತಿವೆ.

4) ಇಲ್ಲ.

5) ಈಗಾಗಲೇ ಸರ್ಕಾರ ನೇಮಕಾತಿಗೆ ಅನುಮೋದನೆ ನೀಡಿದೆ.

ಅನುಬಂಧ - I

ಕಳೆದ ಮೂರು ವರ್ಷಗಳಿಂದ ರಾಜ್ಯದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು ಅನುಮತಿ ಕೋರಿರುವ ವಿವರ.

ಕ್ರಮ ಸಂಖ್ಯೆ	ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಹೆಸರು	ಹುದ್ದೆಗಳ ಸಂಖ್ಯೆ
1	ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ,	100
2	ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ,	27
3	ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ,	75
4	ಕೆನರಾ ಡಿಸಿಸಿ ಬ್ಯಾಂಕ್ ನಿ	26
5	ಬಿಜಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ	102
6	ತುಮಕೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ,	78
7	ಚಿತ್ರದುರ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ	44
8	ಬೀದರ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ,	112
9	ಬೆಂಗಳೂರು ಜಿಲ್ಲಾ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ	02
10	ಬಳ್ಳಾರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ,	82
	ಒಟ್ಟು	650

ಅನುಬಂಧ - 2

ಹುದ್ದೆವಾರು ಸಿಬ್ಬಂದಿ ನೇಮಕಾತಿಗೆ ಅನುಮತಿ ಪಡೆದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ವಿವರ

ಕ್ರ. ಸಂ.	ಇಲಾಖೆಯ ಅನುಮತಿ ಪಡೆದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಹೆಸರು	ವ್ಯವಸ್ಥಾಪಕರು	ಅಧೀಕ್ಷಕರು	ಗುಮಾಸ್ತರು	ಶೀಘ್ರ-ಲಿಪಿಗಾರರು ಬೆರಳಚ್ಚುಗಾರರು	ಕಂಪ್ಯೂಟರ್ ವಿಭಾಗ	ವಾಹನ ಚಾಲಕರು	ಅಟೆಂಡರ್ಸ್ ದೆಫೇದಾರ	ಹಿರಿಯ ಅಭಿಯಂತರರು	ಕೃಷಿ ಅಬಿವೃದ್ಧಿ ಅಧಿಕಾರಿ	ಒಟ್ಟು
1	ಮಂಡ್ಯ	-	-	81	02	-	01	15	01	-	100
2	ಮೈಸೂರು	-	-	27	-	-	-	-	-	-	27
3	ಶಿವಮೊಗ್ಗ	-	-	47	01	-	01	26	-	-	75
4.	ಬಿಜಾಪುರ	-	-	60	02	06	02	30	-	02	102
5.	ತುಮಕೂರು	09	-	40	03	01	03	22	-	-	78
6.	ಚಿತ್ರದುರ್ಗ	-	05	34	02	-	01	02	-	-	44
7.	ಬೆಂಗಳೂರು	-	-	-	-	-	02	-	-	-	02
8.	ಕೆನರಾ ಡಿಸಿಸಿ ಬ್ಯಾಂಕ್ ನಿ ಶಿರಸಿ	07	-	12	-	-	-	07	-	-	26
9.	ಬೀದರ್	22	-	34	-	-	-	11	-	-	67
	ಒಟ್ಟು	38	05	335	10	07	10	113	01	02	521

ಕ್ರ. ಸಂ.	ಒಕ್ಕೂಟದ ಹೆಸರು	ಹುದ್ದೆಗಳ ವಿವರ						
		ಪಶುವೈದ್ಯಾಧಿಕಾರಿ	ಸಹಾಯಕ ವ್ಯವಸ್ಥಾಪಕರು (ಮಾರಾಟ)	ವಿಸ್ತರಣಾಧಿಕಾರಿಗಳು	ಎಂ.ಐ.ಎಸ್. ಸಹಾಯಕರು	ತಾಂತ್ರಿಕ ಅಧಿಕಾರಿ	ಒಟ್ಟು
1	ವಿಮಮೊಗ್	04	02	10	01	-	07
2	ಕೋಲಾರ	01	-	-	-	05	06
ಒಟ್ಟು		05	02	10	01	05	23